# ಬಲು ಅಪರೂಪ ನಮ್ ಜೋಡಿ

ಪ್ರವೀಣ ಕುಲಕರ್ಣಿ



ವಿಶ್ವದ ಅತ್ಯಂತ ಎತ್ತರದ ಮಹಿಳೆ ಮತ್ತು ಅತ್ಯಂತ ಕುಳ್ಳ ಮಹಿಳೆ ಇಬ್ಬರ ಸಮಾಗಮಕ್ಕೆ ಅವಕಾಶ ಕಲ್ಪಿಸುವ ಮೂಲಕ ಕಳೆದ ವಾರ ವಿಶ್ವ ಗಿನ್ನಿಸ್ ದಾಖಲೆಗಳ ದಿನವನ್ನು ಬಲು ವಿಶಿಷ್ಟವಾಗಿ ಆಚರಿಸಲಾಯಿತು. ಅವರು ಪರಸ್ಪರ ಸಂಧಿಸುವ ಕ್ಷಣ ತುಂಬಾ ಮಜವಾಗಿದೆ. ನೆಲದ ಮೇಲೆ ಎರಡಡಿ ಎತ್ತರದಿಂದ ಕುಬ್ಜ ಮಹಿಳೆ ಹಲೋ ಎಂದು ಹೇಳಿ ಕೈಬೀಸಿದರೆ, ಏಳು ಅಡಿ ಎತ್ತರದಲ್ಲಿ ತಲೆ ಆಡಿಸುತ್ತಾ ಎತ್ತರದ ಮಹಿಳೆ ಮರು ಶುಭಾಶಯ ಕೋರಿದಳು. ಇಬ್ಬರೂ ಕೂಡಿ ಚಹಾ ಸೇವಿಸಿದರು. ಚಹಾ ಕಪ್ ಕುಳ್ಳ ಮಹಿಳೆಯ ಪಾಲಿಗೆ ಭಾರವಾದರೆ, ಎತ್ತರದ ಮಹಿಳೆಗೆ ಚಿಕ್ಕದಾಗಿ ತೋರಿತು. ವಿಶ್ವದ ಲಂಬೂವಮ್ಮ ಮತ್ತು ಕುಳ್ಳಿ ಇಬ್ಬರೂ ಸೇರಿ 'ಬಲು ಅಪರೂಪ ನಮ್ ಜೋಡಿ' ಎಂದು ಸಾರಿದರು. ಹೌದು, ಟರ್ಕಿಯ ರುಮೆಯ್ಸಾ ಗೆಲ್ಗಿ ಅವಳಷ್ಟು ಎತ್ತರದ ಮಹಿಳೆ ಸದ್ಯ ಜಗತ್ತಿನಲ್ಲಿ ಬೇರೆ ಯಾರೂ ಇಲ್ಲ. ವಕೀಲೆ, ಸಂಶೋಧಕಿ, ವೆಬ್ ಡೆವಲಪರ್ – ಹೀಗೆ ಬಹುಮುಖ ಪ್ರತಿಭೆ ಆಗಿರುವ ರುಮೆಯ್ಸಾ, ಜಗತ್ತಿನಲ್ಲೇ ದೊಡ್ಡ ಕೈಗಳು, ಉದ್ದ ಬೆರಳುಗಳು, ನೀಳವಾದ ಬೆನ್ನು ಹೊಂದಿದ ಮಹಿಳೆ ಎಂಬ ಹಿರಿಮೆಗೆ ಪಾತ್ರಳಾಗಿದ್ದಾಳೆ. ಅವಳ ಎತ್ತರ ಬರೋಬ್ಬರಿ 7 ಅಡಿ, 0.71 ಇಂಚು!

ಇಷ್ಟೊಂದು ಎತ್ತರ ಹೇಗೆ ಬೆಳೆದೆಯಮ್ಮ ಎಂದು ಆಕೆಯನ್ನು ಕೇಳಿ ನೋಡಿ, 'ಇದೆಲ್ಲ ವೀವರ್ ಸಿಂಡ್ರೋಮ್‌ನ ಫಲ' ಎಂದು ನಗುತ್ತಾ ಉತ್ತರಿಸುತ್ತಾಳೆ. ಇಂತಹ ಸಮಸ್ಯೆ ಇರುವವರಿಗೆ ದೇಹ ಕ್ಷಿಪ್ರಗತಿಯಲ್ಲಿ ಬೆಳೆಯುತ್ತದಂತೆ. ರುಮೆಯ್ಸಾ, ತನ್ನ ನೀಳಕಾಯದ ಕಾರಣದಿಂದ ಸಾಮಾನ್ಯವಾಗಿ ಒಂದು ಕಡೆಯಿಂದ ಮತ್ತೊಂದು ಕಡೆ ಹೋಗುವಾಗ ಗಾಲಿಕುರ್ಚಿ ಬಳಸುತ್ತಾಳೆ. ಆಗಾಗ ವಾಕರ್ ಹಿಡಿದುಕೊಂಡು ನಡೆದಾಡುವುದೂ ಉಂಟು. 55 ಸೆಂ.ಮೀ.ಗಿಂತ ಕಡಿಮೆ ಎತ್ತರದ ಆಸನಗಳಲ್ಲಿ ಅವಳಿಗೆ ಕೂರಲು ಸಾಧ್ಯವಾಗುವುದಿಲ್ಲ. 'ಜಗತ್ತಿನ ಎತ್ತರದ ಮಹಿಳೆ ಎನ್ನುವ ಹಿರಿಮೆ ನನಗೆ ಹೆಮ್ಮೆಯನ್ನೇನೂ ತಂದಿಲ್ಲ. ಆರೋಗ್ಯ ಸಮಸ್ಯೆಯಿಂದ ಆಗಿರುವ ಬೆಳವಣಿಗೆ ಇದು. ನನ್ನಿಂದಾಗಿ ಈ ಕಾಯಿಲೆ ಕುರಿತು ಜನರಲ್ಲಿ ಜಾಗೃತಿ ಉಂಟಾಗುವಂತಾದರೆ ಅದಕ್ಕಿಂತ ಖುಷಿಯ ಸಂಗತಿ ಬೇರಿಲ್ಲ' ಎಂದು ರುಮೆಯ್ಸಾ ಹೇಳುತ್ತಾಳೆ.

ರುಮೆಯ್ಸಾ, 2022ರಲ್ಲಿ ಮೊದಲ ಬಾರಿಗೆ ವಿಮಾನ ಪ್ರಯಾಣ ಮಾಡಿದ್ದಳು. ಟರ್ಕಿಯ ಇಸ್ತಾಂಬುಲ್‌ನಿಂದ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊವರೆಗೆ ಯಾನ ಮಾಡಿದ್ದಳು. ಅವಳು ಕೂರುವ ಸಲುವಾಗಿ ವಿಮಾನದ ಆರು ಕುರ್ಚಿಗಳನ್ನು ತೆಗೆದು ಅವಳಿಗಾಗಿ ವಿಶೇಷ ಆಸನ ಸಿದ್ಧಪಡಿಸಲಾಗಿತ್ತು.

ಇನ್ನು ಇವಳತ್ತ ಬನ್ನಿ. ಈ ಪುಟ್ಟ ಜೀವಿ ಎಂದಾದರೂ ನಿಮ್ಮ ಮುಂದೆ ಬಂದಾಗ ಹುಷಾರು. ಏಕೆಂದರೆ, ಅವಳ ಕುಬ್ಜ ಶರೀರದ ಕಾರಣ ನಿಮ್ಮ ಕಣ್ಣಿಗೆ ಬೀಳದೆಯೂ ಇದ್ದಾಳು. ಎರಡು ಅಡಿ, ಮುಕ್ಕಾಲು ಇಂಚಿನ ಜ್ಯೋತಿ ಅಮ್ಗೆ ಜಗತ್ತಿನ ಅತ್ಯಂತ ಕುಳ್ಳ ಮಹಿಳೆ ಎಂದು ಹೆಸರಾಗಿದ್ದಾಳೆ. ನಮ್ಮ ಭಾರತದ ನಾಗಪುರದ ಈ ಹುಡುಗಿ, ಸಿನಿಮಾದಲ್ಲೂ ನಟಿಸಿದ್ದಾಳೆ. ಮಾಡೆಲಿಂಗ್ ಕ್ಷೇತ್ರದಲ್ಲೂ ಕಾಣಿಸಿಕೊಂಡಿದ್ದಾಳೆ. ವಂಶವಾಹಿನಿ ಸಮಸ್ಯೆಯಾದ ಪ್ರಿಮೋರ್ಡಿಯಲ್ ಡ್ವಾರ್ಫಿಸಂ (ಕುಬ್ಜತೆ) ಅವಳ ಕುಳ್ಳ ಶರೀರಕ್ಕೆ ಕಾರಣ.

'ಬಾಡಿ ಶಾಕ್' ಎಂಬ ಸಾಕ್ಷ್ಯಚಿತ್ರದಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡ ಆಕೆ, ನಂತರ 'ಬಿಗ್ ಬಾಸ್' ಸೀಸನ್ ಆರರಲ್ಲಿ ಭಾಗಿಯಾಗಿದ್ದಳು. ಅಮೆರಿಕನ್ ಟಿ.ವಿ. ಸರಣಿಗಳಲ್ಲೂ ನಟಿಸಿದ ಶ್ರೇಯ ಅವಳದಾಗಿದೆ. 2012ರಲ್ಲಿ, ಆಕೆ ಜಗತ್ತಿನ ಅತ್ಯಂತ ಕುಳ್ಳ ಎಂಬ ಶ್ರೇಯಕ್ಕೆ ಪಾತ್ರವಾದ ನೇಪಾಳದ ಚಂದ್ರ ಬಹದ್ದೂರ್ ಡಾಂಗಿಯನ್ನು ಭೇಟಿ ಮಾಡಿದ್ದಳು. ಲೋನಾವಳದಲ್ಲಿ ಒಂದು ಮೇಣದ ಮ್ಯೂಸಿಯಂ ಇದೆ. ಅಲ್ಲಿ, ಜ್ಯೋತಿ ಅವರ ಮೇಣದ ಪ್ರತಿಮೆಯನ್ನೂ ಪ್ರದರ್ಶನಕ್ಕೆ ಇಡಲಾಗಿದೆ. 'ವಿಶ್ವದ ಅತ್ಯಂತ ಎತ್ತರದ ಮಹಿಳೆಯನ್ನು ಮೊದಲ ಬಾರಿಗೆ ಭೇಟಿ ಮಾಡಿದ್ದು, ಅವರ ಜತೆಯಲ್ಲಿ ಹೆಜ್ಜೆ ಹಾಕಿದ್ದು ಒಂದು ಖುಷಿಯ ಕ್ಷಣ' ಎಂದು ಜ್ಯೋತಿ ಹೇಳುತ್ತಾಳೆ.

ರುಮೆಯ್ಸಾ ಮತ್ತು ಜ್ಯೋತಿ ಅವರ ಎತ್ತರ ಮತ್ತು ಕುಬ್ಜತೆ ಕುರಿತು ಗಿನ್ನಿಸ್ ದಾಖಲೆ ನಿರ್ಮಾಣವಾದಾಗ ಇಬ್ಬರ ಸಾಧನೆಯನ್ನೂ ಸಚಿತ್ರವಾಗಿ ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ರುಮೆಯ್ಸಾ ಜೀವನಗಾಥೆಯನ್ನು ಜ್ಯೋತಿ ಮತ್ತು ಜ್ಯೋತಿಯ ಜೀವನಗಾಥೆಯನ್ನು ರುಮೆಯ್ಸಾ ಕುತೂಹಲದಿಂದ ಓದಿದ್ದಾರೆ. 'ನಮ್ಮ ಎತ್ತರ ಹಾಗೂ ಕುಬ್ಜತೆ ಕಾರಣದಿಂದಲೇ ಜಗತ್ತು ನಮ್ಮನ್ನು ಕುತೂಹಲದಿಂದ ನೋಡಿದೆ. ಜನ ನಮ್ಮ ಮೇಲೆ ಪ್ರೀತಿಯ ಮಳೆಯನ್ನೇ ಸುರಿಸುತ್ತಾರೆ' ಎಂದು ಇಬ್ಬರೂ ನಗುತ್ತಾ ಹೇಳುತ್ತಾರೆ. ಅಸಹಜವಾದ ದೈಹಿಕ ತೊಂದರೆಗಳನ್ನು ಅಸಾಮಾನ್ಯವಾಗಿ ಮೆಟ್ಟಿ ನಿಂತು ಇತರರಿಗೂ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65